

ದೊಡ್ಡ ಮಂಚ. ನಾವು ಹೈಸ್ಕೂಲಿಗೆ ಬಂದ ಮೇಲೂ ಇದೇ ಕಸ್ತೂರಿ, ಅದೇ ಬೆಕ್ಕನ್ನು ನಮ್ಮ ತಂಗಿಯರೂ ತಮ್ಮಂದಿರೂ ಓದಿದರು. ಮುಂದೆ ಬದಲಾಯಿತು. ಈಗ ಕನ್ನಡ ಶಾಲೆಯ ಮಕ್ಕಳು ಯಾವ ಪ್ರಾಸ ಪದ್ಯ ಓದುತ್ತಿದ್ದಾರೋ ತಿಳಿಯದು. ಆದರೆ, ಈಗಿನ ಮಕ್ಕಳೂ ಈ ತುತ್ತೂರಿ ಮತ್ತು ಬೆಕ್ಕಿನ ಪದ್ಯವನ್ನು ಓದಲಿ ಎಂದು ನಾನು ಬಯಸುವೆ. ಮುಖ್ಯವಾಗಿ ತುತ್ತೂರಿಯೂದುವ ಜಂಭದ ಕಸ್ತೂರಿಯ ಪದ್ಯ ಅವರೂ ಓದಬೇಕು.

ಅದೇನಂಥ ವಿಶೇಷ ಈ ಪದ್ಯದಲ್ಲಿ ಎಂದರೆ ಅದರ ಪ್ರಾಸ. ತುತ್ತೂರಿ ಪದ್ಯ ಇಷ್ಟು ವರ್ಷಗಳಾದರೂ ನನ್ನಂತೆಯೇ ಅನೇಕರ ತುದಿನಾಲಿಗೆಯ ಮೇಲಿರುವುದರ ರಹಸ್ಯ ಆ ಪ್ರಾಸ ಮತ್ತು ನಾದವೇ. ಅದೇ ಮಕ್ಕಳ ಮುಖ್ಯ ಆಕರ್ಷಣೆ. ಆಮೇಲೆ ನೀತಿ ಗೀತಿ ವಗೈರೆ.

ತುತ್ತೂರಿ, ಕಸ್ತೂರಿ, ಸರಿಗಮ, ಗ ಗ ಗ ಗ, ಜಂಭದ ಕೋಳಿ, ಇವೆಲ್ಲವೂ ಉಂಟುಮಾಡುವ ಶಬ್ದಗುಂಗು ಮಗುವಿನ ಕಿವಿಗೆ ಮೊದಲ ಹಬ್ಬ. ಆಮೇಲೆ, ಆ ಗುಂಗಿನಿಂದಲೇ ಮಗುವಿನ ಮನಸ್ಸಿನಲ್ಲಿ ಪದ್ಯವು ಬೊಂಬೆ, ಬೊಂಬೆಯ ದೃಶ್ಯಗಳಾಗುತ್ತದಲ್ಲ ಅದು ಇನ್ನೂ ದೊಡ್ಡ ಹಬ್ಬ. ಇವೆರಡೂ ಕವಿತಮಟೆಯಿಂದ ಮನಸ್ಸಿನ ಪರದೆಯಿಂದ ಮಾಸಲುಂಟೇ? ಕೈಯಲ್ಲಿ ಪೀಪಿಯನ್ನು ನಟಿಸಿಕೊಂಡು ಜಂಭದಿಂದ ಅಡ್ಡಗಾಲು ಹಾಕಿ ಕಸ್ತೂರಿ ಹುಡುಗನಂತೆ ನಡೆಯದ ಯಾವ ಹುಡುಗ ಹುಡುಗಿಯೂ ಆಗ ಇದ್ದಿರಲಾರರೇನೋ.

ಶಿಶುಪ್ರಾಸ ಯಾ ಮಕ್ಕಳ ಕವಿತೆಯ ಯಶಸ್ಸು ಅಡಗಿರುವುದು ಮೂರರಲ್ಲಿ ಎಂದು ನನಗನಿಸುತ್ತದೆ. ಒಂದು, ಮಕ್ಕಳ ಕಿವಿಗೆ ಹಿತವಾಗುವ ಶಬ್ದವು ಪುನರಾವರ್ತಿತವಾಗುವ ಸರಳ ಪದಗುಚ್ಛ. ಎರಡನೆಯದು, ಪ್ರಾಸಮಯವಾದ ಪುಟ್ಟ ಸಾಲುಗಳು. ಮೂರನೆಯದು, ಕುತೂಹಲ ಕಾಯ್ದುಕೊಳ್ಳುವ ಒಂದು ಸಣ್ಣ ಪ್ರಸಂಗ. ಮೊದಲೆರಡರ ಪ್ರಭಾವದಿಂದ ಕವಿತೆಯು ಹೇಳುವ ಪ್ರಸಂಗ ಮಕ್ಕಳ ಮನದಲ್ಲಿ ಒಂದು ಚಿತ್ರನಾಟಕವಾಗುತ್ತದೆ. ಎಷ್ಟು ಮಕ್ಕಳಿದ್ದಾವೋ ಅಷ್ಟು ಬಗೆಯ ಕಲ್ಪನಾವಿಲಾಸ! ಪ್ರಸಂಗದಲ್ಲೊಂದು ನೀತಿಯನ್ನು ಅಡಗಿಸಿದ್ದಾದರೆ ಕಲ್ಪನಾ ವಿಲಾಸದ ಮೂಲಕವೇ ಅದು ಅವುಗಳ ಮನ ಹೊಗಬೇಕು. ನೀತಿಯಿರದಿದ್ದರೂ ಬಾಧಕವಿಲ್ಲ. ಚಿತ್ರನಾಟಕವೊಂದು ಮನದೊಳಗೆ ಬೆಳೆಯಬೇಕು. ಅದು ಮಗುವನ್ನು ಕ್ಷಣವಾದರೂ ಉಲ್ಲಸಿತಗೊಳಿಸಬೇಕು.

ತುತ್ತೂರಿ ಪದ್ಯ ನಮಗೆ ಕೊಟ್ಟದ್ದು ಉಲ್ಲಾಸವನ್ನೇ. ಪದ್ಯದಲ್ಲಿ ಬರುವ ಕೊಳವನ್ನು ನನಗೆ ಆಗ ಕಲ್ಪಿಸಿಕೊಳ್ಳಲು ಆಗಲೇ ಇಲ್ಲ. ನಮ್ಮೂರಿನಲ್ಲಿ ಕೊಳ, ಸರೋವರ, ಪುಷ್ಕರಿಣಿ – ಇವೆಲ್ಲವೂ ಕಂಡರಿಯದ ನೀರಸೆಲೆಗಳು. ಕೆರೆ, ದೊಣೆ, ಚಿಲುಮೆ ಇವು ನಮಗೆ ಗೊತ್ತಿದ್ದವು. ನಾನು 'ತುತ್ತೂರಿ ಊದುತ ಕೊಳದ ಬಳಿ' ಎನ್ನುವ ಸಾಲನ್ನು ನಮ್ಮನೆಯಿಂದ ನೋಟದೂರದಲ್ಲಿದ್ದ ಕೆರೆಯೇರಿಗೆ ಬದಲಾಯಿಸಿಕೊಂಡು 'ತುತ್ತೂರಿ ಊದುತ ಕೆರೆಯ ಬಳಿ' ಎಂದು ಹಾಡಿಕೊಳ್ಳುತ್ತಿದ್ದೆ.

ಈ ಪದ್ಯ ಹೇಳುವ ಜಂಭದ ಕೋಳಿಗಳ ಬಗ್ಗೆ ನಮಗೆ ಹುಡುಗಿಯರಿಗೆ ಆಗಲೇ ಅಸ್ಪಷ್ಟವಾದ ಅರಿವಿತ್ತು. ನಮ್ಮದೇ ಜೊತೆಗೆ ಓದುತ್ತಿದ್ದ ನಮ್ಮೂರಿನ ಕಂಟ್ರಾಕ್ಟರರ ಮಗಳು ಹಾಗೂ ಪಿಡಬ್ಲ್ಯೂಡಿ ಎಂಜನಿಯರರ ಮಗಳು ನಮ್ಮ ಕಣ್ಣಲ್ಲಿ ಪದ್ಯದ ಜಂಭದಕೋಳಿ ಉರುಫ್ ಕಸ್ತೂರಿಯಾಗುತ್ತಿದ್ದರು. ಅವರು ಹಾಗೆ ತಮ್ಮ ತುತ್ತೂರಿಗಳನ್ನು ಜಾರಿಸಿಕೊಂಡು ಕೆರೆಗೆ ಬೀಳಿಸಿಕೊಂಡರೆ ನಮಗೊಂದು ವಿಶೇಷ ಸಮಾಧಾನ. ಅವರೇ ಬೀಳುವುದು ಮಾತ್ರ ಖಂಡಿತವಾಗಿ ಬೇಡ!

ಈಗ ಅವರೆಲ್ಲ ಎಲ್ಲಿದ್ದಾರೋ... ಪದ್ಯ ಇದೆ, ಕಸ್ತೂರಿ ಇದ್ದಾನೆ, ಕೊಂಡವರ ಜಂಭವು, ನಮ್ಮ ಕಣ್ಮುಂದೆಯೇ ಜಾರಿ ಬೀಳಲಿ ಎಂಬ ಸಾಮಾನ್ಯರ ಆಶಯವೂ ಹಾಗೆಯೇ ಇದೆ. ಈ ಮಕ್ಕಳ ಪದ್ಯ ನಗುನಗಿಸುತ್ತಲೇ ಹೇಳುವುದೂ ಇದೇ ದೊಡ್ಡದೊಡ್ಡವರ ಗರ್ವಭಂಗದ ಆಶಯವನ್ನೇ!

**–ಲಲಿತಾ ಸಿದ್ಧಬಸವಯ್ಯ**